ಕಥೆ

# ಕೊರೊನಾ ಕಾಲದ ನಂಜುಂಡರು



ಮಲ್ಲಿಕಾರ್ಜುನ ಹಿರೇಮಠ

ಕಲೆ: ವಿಶ್ವನಾಥ್ ಎ.ಎಸ್.

ಬಾಗಲ ಮ್ಯಾಲೆ ರಪ್ ರಪ್ ಬಡಿದ ಸಪ್ಪಳ... ರಾತ್ರಿ ತಡವಾಗಿ ನಿದ್ದೆ ತಗೊಂಡಿತ್ತು. ಕೊರೊನಾ ಹಾವಳಿಯಿಂದಾಗಿ ಗ್ಯಾರೇಜಿನ ಕೆಲಸಗಾರರು ಒಬ್ಬೊಬ್ಬರಾಗಿ ಕೆಲಸ ಬಿಟ್ಟಿದ್ದರಿಂದ, ಬಾಕಿ ಉಳಿದಿದ್ದ ಕೆಲಸಗಳಿಂದಾಗಿ ದುಡ್ಡು ಬಾರದ್ದರಿಂದ ಗಣೇಶ, ಅವರಿಗೆ ಪಗಾರ ಮಾಡಲು ಆಗಿರಲಿಲ್ಲ. ಕೆಲಸ ಕಳಕೊಂಡ ಮಶಿನ್ನುಗಳು ನೆಲಕಚ್ಚಿ ಬಿದ್ದಿವೆ. ತುಂಬಿ ತುಳುಕುತಿದ್ದ ಗ್ಯಾರೇಜು ಬಿಕೋ ಅಂತಿದೆ. ಕುಟ್ಟುವ, ತಟ್ಟುವ, ಮುರಿಯುವ, ಬೆಸೆಯುವ ಯಾವ ಆವಾಜೂ ಈಗಿಲ್ಲ. ಆದರೆ ಇದೀಗ ಕೊರೊನಾ ಯುದ್ಧ ವಿರಾಮ ಘೋಷಿಸಿದ್ದರಿಂದಾಗಿ ಗಣೇಶನಲ್ಲಿ ಇನ್ನು ಗ್ಯಾರೇಜು ಸುರು ಮಾಡಬಹುದಲ್ಲ ಎಂಬ ಆಸೆಯೂ ಚೂರುಪಾರು ಮೊಳೆತಿದೆ.

ಅವನಿಗೆ ಬೇಜಾರು ಆದಾಗಲೆಲ್ಲ ತಾನು ಸಾಕಿದ್ದ ಮೊಲವನ್ನ ತೊಡೆಯ ಮ್ಯಾಲೆ ಕೂಡಿಸಿಕೊಂಡು ಅದರ ಮೈಮ್ಯಾಲೆ ಕೈಯಾಡಿಸ್ತಾ ಕೂತರೆ ಪರಮ ಸುಖ ಅನಿಸ್ತಿತ್ತು. ಬೇಟೆಗಾರನೊಬ್ಬ ಅದನ್ನ ತನ್ನ ಬೇಟೆ ಅಂತ ಒಯ್ಯೋದು ಕಂಡು ಅವನಿಗೆ ದುಡ್ಡು ಕೊಟ್ಟು ತಂದು ಸಾಕಿದ್ದ. ಗ್ಯಾರೇಜು ಖಾಲಿ ಇದ್ದಾಗ, ಗೂಡಿಂದ ಬಿಟ್ಟರೆ ಚುರುಕಾಗಿ ಲುಟುಪುಟು ಓಡಾಡತಿತ್ತು. ಆದ್ರೆ ಹೀಗೇ ಓಡಾಡತಾ ಒಮ್ಮೆ ಹೊರಬಿದ್ದಾಗ ನಾಯಿಯ ಬಾಯಿಗೆ ಬಲಿ ಆಯಿತು. ಮುದ್ದು ಜೀವವನ್ನ ಅವನಿಗೆ ಉಳಿಸಿಕೊಳ್ಳಲಾಗಲಿಲ್ಲ. ಹಾಳು ಸುರಿವ ಗ್ಯಾರೇಜಿನಲ್ಲಿ ಒಬ್ಬನೇ ಅಪರಾತ್ರಿವರೆಗೂ ಏನೇನೋ ಯೋಚಿಸುತ್ತಾ ಕೂತ ಗಣೇಶ ಶಟರ್ಸ್ ಹಾಕ್ಕೊಂಡು ಮನಿಗೆ ಬಂದಾಗ ಆಗಲೇ ರಾತ್ರಿ ಒಂದು ಗಂಟೆಯಾಗಿತ್ತು.

ಅವ್ವ ದೊಡ್ಡ ಮಗುವನ್ನ ಕರಕೊಂಡು ಮಲಗಿದ್ದಳು. ಎಂಟು ತಿಂಗಳ ಮಗುವಿನ ಜತೀಲೆ ಮಲಗಿದ್ದ ಹೆಂಡತಿ ತನ್ನದೇ ದಾರಿ ಕಾಯ್ತಿರಬೇಕು. ಇವನ ಹೆಜ್ಜೆಯ ಸಪ್ಪಳಕ್ಕೇ ಎದ್ದು ಬಾಗಲಾ ತಗೆದು 'ಏಟೊತ್ತು' ಅಂತ ವಟಗುಡತಾ ಮತ್ತೆ ಹಾಸಿಗೆಗೆ ಹೋದಳು. ಒಂದು ಕ್ಷಣ ಆಕೆಯ ಮಗ್ಗಲು ಮಲಗಿದರೆ ನಿರುಂಬಳ ಆದೀತು ಅನಿಸಿತು. ಆದರೆ ಮರುಕ್ಷಣವೇ ಕೊರೊನಾ ನೆನಪಾಗಿ